# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಸಲೀಂ ಅಹಮದ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 715

ಉತ್ತರಿಸಬೇಕಾದ ದಿನಾಂಕ : 22-02-2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸಹಕಾರಿ ಇಲಾಖಾ ವ್ಯಾಪ್ತಿಗೆ ಒಳಪಡುವ ವಿವಿಧ ದರ್ಜೆಯ ಸಹಕಾರಿ ಬ್ಯಾಂಕ್‌ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಖ್ಯಾ ವಿವರಗಳನ್ನು ಒದಗಿಸುವುದು) | ಸಹಕಾರಿ ಇಲಾಖಾ ವ್ಯಾಪ್ತಿಗೆ ಒಳಪಡುವ ವಿವಿಧ ದರ್ಜೆಯ ಸಹಕಾರಿ ಬ್ಯಾಂಕ್‌ಗಳ ಸಂಖ್ಯೆ 284 ಗಳಿರುತ್ತವೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ | ಇಂತಹ ಸಹಕಾರಿ ಬ್ಯಾಂಕ್‌ಗಳು ತಮ್ಮ ಸದಸ್ಯರು/ಖಾತೆದಾರರು/ಸಾಲ ಪಡೆದುಕೊಂಡವರು ಸೇರಿದಂತೆ ವಿವಿಧ ದರ್ಜೆಯ ಖಾತೆದಾರರಿಗೆ ಮೋಸ ಮಾಡಿದ ಮತ್ತು ಬ್ಯಾಂಕ್‌ಗಳನ್ನು ಮುಚ್ಚಿ ಠೇವಣಿದಾರರು ಮತ್ತಿತರ ಖಾತೆದಾರರಿಗೆ ಖಾಯಂ ಆಗಿ ವಂಚಿಸಿರುವ ಎಷ್ಟು ಪ್ರಕರಣಗಳು ಕಳೆದ ಮೂರು ವರ್ಷಗಳಲ್ಲಿ ದಾಖಲಿಸಲ್ಪಟ್ಟಿವೆ; ಅಂಥ ಸಹಕಾರಿ ಬ್ಯಾಂಕ್‌ಗಳ ಮೇಲೆ ಕೈಗೊಂಡ ಕ್ರಮಗಳೇನು; | ಕಳೆದ 03 ವರ್ಷಗಳಲ್ಲಿ 01 ಪ್ರಕರಣದಲ್ಲಿ ಠೇವಣಿದಾರರಿಗೆ ವಂಚಿಸಿರುವುದು ದಾಖಲಿಸಲ್ಪಟ್ಟಿರುತ್ತದೆ.<br>ಬೆಂಗಳೂರು ನಗರದ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಈ ಬ್ಯಾಂಕ್‌ನಲ್ಲಿ ಅವ್ಯವಹಾರ ನಡೆದಿರುತ್ತದೆ.<br>ಈ ಬ್ಯಾಂಕ್ ವಿರುದ್ಧ ಕೈಗೊಂಡ ಕ್ರಮಗಳು ಕೆಳಕಂಡಂತಿರುತ್ತವೆ<br>• ಸಿಐಡಿ ತನಿಖೆಗೆ ಆದೇಶಿಸಲಾಗಿದೆ.<br>• ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 64 ರ ವಿಚಾರಣೆಗೆ ಆದೇಶಿಸಲಾಗಿದೆ.<br>• 2014-15 ರಿಂದ 2018-19 ರವರೆಗಿನ ಲೆಕ್ಕಪತ್ರಗಳನ್ನು ಮರುಲೆಕ್ಕಪರಿಶೋಧನೆಗೆ ಆದೇಶಿಸಲಾಗಿದೆ.<br>• ಜಾರಿ ನಿರ್ದೇಶನಾಲಯ ಸ್ಥಿರಾಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿರುತ್ತದೆ.<br>• ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದೆ. ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ |
| ಇ | ಸಹಕಾರಿ ಕಾನೂನು ಕಟ್ಟಳೆಗಳಲ್ಲಿ ಖಾತೆದಾರರ ಹಣಕ್ಕೆ ಖಾತರಿ ಒದಗಿಸಿಕೊಡುವ ಯಾವ ಯಾವ ಕಾನೂನುಗಳು ಜಾರಿಯಲ್ಲಿವೆ; ಪ್ರಸ್ತುತ ಇರುವ ಕಾನೂನು ನಿಯಮಗಳನ್ನು ಗಾಳಿಗೆ ತೂರಿ ಖಾತೆದಾರರಿಗೆ ವಂಚಿಸುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮಗಳೇನು? | ಸಹಕಾರಿ ಕಾನೂನು ಕಟ್ಟಳೆಗಳಲ್ಲಿ ಖಾತೆದಾರರ ಹಣಕ್ಕೆ ಖಾತರಿ ಒದಗಿಸುವ ಸಲುವಾಗಿ ಈ ಕೆಳಕಂಡ ನಿಯಮಾವಳಿಗಳನ್ನು ಪಾಲಿಸಲಾಗುತ್ತಿದೆ.<br>1. DEPOSIT INSURANCE AND CREDIT GUARRANTEE CORPORATION ಅಡಿ ಗ್ರಾಹಕರ ಠೇವಣಿಗೆ ಗರಿಷ್ಠ ರೂ.5.00 ಲಕ್ಷ ಠೇವಣಿಗಳವರೆಗೆ ವಿಮಾ ಖಾತ್ರಿ ಸೌಲಭ್ಯ ಇರುತ್ತದೆ. ಸದರಿ ವಿಮೆಗೆ ಬ್ಯಾಂಕಿನಿಂದ ವಿಮಾ ಪ್ರೀಮಿಯಂ ಪಾವತಿಸಲಾಗುತ್ತಿದೆ. |

| | | |
|---|---|---|
| | | 2. ರಿಸರ್ವ್ ಬ್ಯಾಂಕ್ ನಿಯಮಗಳು ಹಾಗೂ ಬಿ.ಆರ್ ಆಕ್ಟ್ 1949 ರ ಸೆಕ್ಷನ್ 18 ಹಾಗೂ 24 ರನ್ವಯ ಬ್ಯಾಂಕಿನಿಂದ ಶೇ.18 ಮತ್ತು ಶೇ.4 ರಷ್ಟನ್ನು ಕ್ರಮವಾಗಿ ಎಸ್.ಎಲ್.ಅರ್ & ಸಿ.ಆರ್.ಆರ್ ನಿಯಮ ಪಾಲಿಸುತ್ತಿದ್ದು, ಎಸ್.ಎಲ್.ಆರ್ ಮೊತ್ತವನ್ನು ಸರ್ಕಾರಿ ಭದ್ರತಾ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗುತ್ತಿದೆ.<br>3. ಬ್ಯಾಂಕಿನ ಸಾಲ ನೀಡಿಕೆ, ವಿನಿಯೋಗ ಎಲ್ಲಾ ವ್ಯವಹಾರವನ್ನು ಕೂಡ ಬ್ಯಾಂಕಿನ ಅನುಮೋದಿತ ನಿಯಮಾವಳಿ, ಬ್ಯಾಂಕಿಂಗ್ ರೆಗ್ಯೂಲೇಷನ್ ಕಾಯ್ದೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕಾರ ನಡೆಸಲಾಗುತ್ತಿದೆ.<br>ಬ್ಯಾಂಕಿನ ಲೆಕ್ಕ ಪತ್ರಗಳ ಬಗ್ಗೆ ಕಾಲಕಾಲಕ್ಕೆ ಶಾಸನಬದ್ಧ ಲೆಕ್ಕಪರಿಶೋಧನೆ, ಸಮವರ್ತಿ ಲೆಕ್ಕ ಪರಿಶೋಧನೆ, ನಬಾರ್ಡ್‌ನಿಂದ ಪರಿವೀಕ್ಷಣೆ, ಆರ್.ಬಿ.ಐ, ಅಪೆಕ್ಸ್ ಬ್ಯಾಂಕಿನಿಂದ ಪರಿವೀಕ್ಷಣೆ ನಡೆಸಲಾಗುತ್ತಿದೆ. |

**ಸಂಖ್ಯೆ ಸಿಒ 12 ಸಿಆರ್‌ಸಿ 2022**

**(ಎಸ್. ಟಿ. ಸೋಮಶೇಖರ್)**

ಸಹಕಾರ ಸಚಿವರು

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 715 ಕ್ಕೆ ಅನುಬಂಧ**

| ಕ್ರ.ಸಂ. | ಜಿಲ್ಲೆಯ ಹೆಸರು | ಪಟ್ಟಣ ಸಹಕಾರ ಬ್ಯಾಂಕುಗಳು (ಸೌಹಾರ್ದ ಬ್ಯಾಂಕುಗಳ ಸೇರಿ) | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ |
|---|---|---|---|
| 1 | ಬೆಂಗಳೂರು | 47 | ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ + ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು =2 |
| 2 | ಬೆಂಗಳೂರು ಗ್ರಾಮಾಂತರ | 2 | 0 |
| 3 | ರಾಮನಗರ | 2 | 0 |
| 4 | ತುಮಕೂರು | 12 | 1 |
| 5 | ಚಿತ್ರದುರ್ಗ | 3 | 1 |
| 6 | ಕೋಲಾರ | 0 | 1 |
| 7 | ಚಿಕ್ಕಬಳ್ಳಾಪುರ | 0 | 0 |
| 8 | ಶಿವಮೊಗ್ಗ | 8 | 1 |
| 9 | ದಾವಣಗೆರೆ | 12 | 1 |
| 10 | ಮೈಸೂರು | 10 | 1 |
| 11 | ಮಂಡ್ಯ | 3 | 1 |
| 12 | ಹಾಸನ | 5 | 1 |
| 13 | ಕೊಡಗು | 3 | 1 |
| 14 | ದಕ್ಷಿಣ ಕನ್ನಡ | 8 | 1 |
| 15 | ಚಿಕ್ಕಮಗಳೂರು | 3 | 1 |
| 16 | ಚಾಮರಾಜನಗರ | 1 | 0 |
| 17 | ಉಡುಪಿ | 7 | 0 |
| 18 | ಬೆಳಗಾವಿ | 40 | 1 |
| 19 | ವಿಜಯಪುರ | 17 | 1 |
| 20 | ಧಾರವಾಡ | 11 | 1 |
| 21 | ಉತ್ತರ ಕನ್ನಡ | 9 | 1 |
| 22 | ಹಾವೇರಿ | 9 | 0 |

| | | | |
|---|---|---|---|
| 23 | ಗದಗ | 7 | 0 |
| 24 | ಬಾಗಲಕೋಟೆ | 13 | 1 |
| 25 | ಕಲಬುರಗಿ | 8 | 1 |
| 26 | ರಾಯಚೂರು | 3 | 1 |
| 27 | ಬೀದರ್ | 5 | 1 |
| 28 | ಬಳ್ಳಾರಿ | 7 | 1 |
| 29 | ಕೊಪ್ಪಳ | 7 | 0 |
| 30 | ಯಾದಗಿರಿ | 0 | 0 |
| | ಒಟ್ಟು | 262 | 22 |

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಪಟ್ಟಣ ಬ್ಯಾಂಕುಗಳ ವಿಭಾಗ)